ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 05.01.2024.

**ಪಾಟೀ ಸವಾಲುಃ ಮೇಲ್ಮನವಿದಾರ ಪರ ವಕೀಲರಿಂದಃ**

ನನ್ನ ತಂದೆ ಹೆಸರು ವೀರಬಸವಂತರಾವ್ ಎಂದರೆ ಸರಿ, ಅವರ ಮೂಲ ದಾವೆ ನಂ.42/2001 ಅಂತ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಕೇಸಿಗೆ ಅವರೇ ಮಾಹಿತಿ ಕೊಟ್ಟಿದ್ದರು ಎಂದರೆ ಸರಿ. ಸದರಿ ಕೇಸಿನಲ್ಲಿ ನನ್ನ ತಂದೆ ಸಾಕ್ಷಿ ಕೂಡಾ ಆಗಿದೆ ಎಂದರೆ ಸರಿ. ಸದರಿ ಕೇಸಿನಲ್ಲಿ ಪ್ರತಿವಾದಿ ಪುರಸಭೆ ಪ್ರತಿವಾದ ಪತ್ರ ಸಲ್ಲಿಸಿರುತ್ತದೆ ಎಂದರೆ ಸರಿ. ಉಭಯ ಪಕ್ಷಗಾರರ ವಾದ-ವಿವಾದ ನಂತರ ಸದರಿ ದಾವೆ ಡಿಕ್ರಿಯಾಗಿದೆ ಎಂದರೆ ಸರಿ. ಸದರಿ ಡಿಕ್ರಿ ಸ್ಕ್ವಾಯರ್ ಫಿಟ್ ಮೇಲೆ ಆಗಿತ್ತು ಎಂದರೆ ಸರಿ. ನನ್ನ ತಂದೆ 2011 ರಲ್ಲಿ ತಿರಿಕೊಂಡಿರುತ್ತಾರೆ.

ನನ್ನ ತಂದೆಗೆ 6 ಜನ ಮಕ್ಕಳು ಅವರೇಂದರೇ, ನಾನು, ಶರಣಬಸಪ್ಪ, ಮಲ್ಲಿರ್ಕಾಜುನ, ಹನಮಂತರಾವ್, ನೀಲಕಂಠರಾವ್ ಮತ್ತು ಮಹಾದೇವಪ್ಪ ಇರುತ್ತೇವೆ. ಅದೇ ರೀತಿ ನನ್ನ ತಂದೆಗೆ 4 ಜನ ಹೆಣ್ಣು ಮಕ್ಕಳು ಇದ್ದರು ಅವರೆಂದರೇ, ಭಾಗಿರಥಿ, ಪ್ರಭಾವತಿ, ಕಲಾವತಿ ಮತ್ತು ಶೀಲಾವತಿ ಇರುತ್ತಾರೆ. ಸದರಿ ನನ್ನ 4 ಜನ ಅಕ್ಕ-ತಂಗಿಯರು ಇರುತ್ತಾರೆ. ನನ್ನ ತಮ್ಮ ಮಲ್ಲಿಕಾರ್ಜುನ ಮೃತಪಟ್ಟಿರುತ್ತಾರೆ, ಅವರಿಗೆ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ. ಅವರೆಂದರೇ, ಕೋಮಲಾದೇವಿ, ಮಕ್ಕಳಾದ ಸಂಧ್ಯಾ, ಶಿಲ್ಪಾ, ಹಾಗೂ ಸಚೀನ್ ಇರುತ್ತಾರೆ.

ನನ್ನ ತಂದೆ ನ್ಯಾಯಾಲಯದ ಹಾಕಿದ ಕೇಸಿನ ಬಗ್ಗೆ ನನಗೆ ಗೊತ್ತಿತು. ನ್ಯಾಯಾಲಯದ ಡಿಕ್ರಿಯಾದ ನಂತರ ನಾವುಗಳು 11 ವರ್ಷದ ನಂತರ ಡಿಕ್ರಿ ತಿದ್ದುಪಡೆಯ ಅರ್ಜಿ ಹಾಕಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ಬರಿ 5 ಜನರ ಸಹೋದರರ ಹೆಸರು

ಕೊಟ್ಟಿರುತ್ತೇವೆ ಎಂದರೆ ಸರಿ. ಮೊದಲು ಡಿಕ್ರಿ ತಿದ್ದುಪಡೆಗೆ ಹಾಕಿದ ಅರ್ಜಿಯನ್ನು ವಜಾ ಮಾಡಿಸಿಕೊಂಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿ ವಜಾ ಮಾಡಿಸಿಕೊಂಡ ನಂತರ ದಿಃ 15.02.2017 ರಂದು ಪುನಃ ಡಿಕ್ರಿ ತಿದ್ದುಪಡೆಗೆ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ಅರ್ಜಿಗೆ ಪುರಸಭೆ ರವರು ತಕರಾರು ಹಾಕಿರುತ್ತಾರೆ ಎಂದರೆ ಸರಿ. ನನ್ನ ತಂದೆ ಇರುವವರೆಗೂ ಡಿಕ್ರಿ ತಿದ್ದುಪಡೆಗೆ ಅರ್ಜಿ ಹಾಕಿಕೊಂಡಿಲ್ಲ ಎಂದರೆ ಸರಿ.

ನನ್ನ ತಂದೆ ಮೂಲ ದಾವೆಯನ್ನು ಒಬ್ಬರೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆ ಅವರ ಜೀವಂತ ಕಾಲಕ್ಕೆನೇ ಡಿಕ್ರಿಯಾಗಿತ್ತು ಎಂದರೆ ಸರಿ. ನನ್ನ ತಂದೆ ಜೀವಂತ ಕಾಲಕ್ಕೆ ವಾದಪತ್ರದಲ್ಲಿ ಮೂಲ ದಾವೆಯಲ್ಲಿ ತನಗೆ ಇಷ್ಟು ಜನ ಮಕ್ಕಳು ಇದ್ದರು ಎಂದು ಬರೆಯಿಸಿಲ್ಲ. ಸದರಿ ಮೂಲ ದಾವೆಯಲ್ಲಿ ಈ ಕೇಸಿನ 2 ರಿಂದ 5 ನೇ ಎದುರುದಾರರ ಕೂಡಾ ಪಾರ್ಟಿ ಇರಲಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಪುರಸಭೆ ದಾಖಲೆಗಳಲ್ಲಿ ಹೆಸರುಗಳನ್ನು ದಾಖಲಿಸಬೇಕಾದರೆ ಹಕ್ಕು ಸೌಮ್ಯಗಳ ದಾಖಲೆಗಳನ್ನು ನೀಡಬೇಕು ಎಂದರೆ ಸರಿ. ನಾವು ಕೆಳ ನ್ಯಾಯಾಲಯದಲ್ಲಿ ಪುರಸಭೆ ಖಾತೆ ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ನನ್ನ ತಂದೆ ದಾವಾ ಸ್ವತ್ತಿನಲ್ಲಿ ಹೇಳಿದಂತೆ ಸ್ವತ್ತಿನ ವಿಸ್ತೀರ್ಣ ಹೊಂದಿದ್ದನು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರಲಿಲ್ಲ ಎಂದರೆ ಸರಿಯಲ್ಲ.

ಮೇಲ್ಮನವಿದಾರರ ಕಛೇರಿ ಸಿಬ್ಬಂದಿ ರವರು ಯಾವ ದಿನಾಂಕದಂದು ನಮ್ಮ ಕಬ್ಜೆಗೆ ಹರಕತ್ ಮಾಡಿರುತ್ತಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿ ಬರೆಯಿಸಿಲ್ಲ. ತೀರ್ಪು ನನ್ನ ತಂದೆ ಪರವಾಗಿ ಆಗಿದ್ದು ನನಗೆ ಗೊತ್ತಿತ್ತು. ಪುರಸಭೆ ರವರು ನಮಗೆ ಹರಕತ್ ಮಾಡುವ ಕಾಲಕ್ಕೆ ಡಿಕ್ರಿಯಲ್ಲಿ ತಪ್ಪಾಗಿ ವಿಸ್ತೀರ್ಣ ದಾಖಲಾಗಿದೆ ಎಂದು ನಮ್ಮ ಗಮನಕ್ಕೆ ಕಂಡುಬಂದಿತು

ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ವಿಸ್ತೀರ್ಣ ತಪ್ಪಾಗಿ ದಾಖಲಾದ ಬಗ್ಗೆ ನಮ್ಮ ಗಮನಕ್ಕೆ ಇದ್ದಿರಲಿಲ್ಲ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ.

ಕೆಳ ನ್ಯಾಯಾಲಯ ವಿಸ್ತೀರ್ಣವನ್ನು ತಿದ್ದುಪಡೆ ಮಾಡಿದ ನಂತರ ದಿಃ 28.10.2017 ರಂದು ಹೊಸದಾಗಿ ಡಿಕ್ರಿ ಬರೆದಿರುತ್ತಾರೆ ಎಂದರೆ ಸರಿ. ನಿಪಿ-1 ರಲ್ಲಿ ವಿಸ್ತೀರ್ಣ ಬರೆದಿಲ್ಲ ಎಂದರೆ ಸರಿ. ನಮ್ಮ ತಂದೆ ತಿರಿಕೊಂಡ ನಂತರ ಇವತ್ತಿನವರೆಗೂ ಮುನಿಸಿ ಪಾರ್ಟಿ ದಾಖಲೆಗಳನ್ನು ನಮ್ಮ ಹೆಸರು ದಾಖಲಾಗಿಲ್ಲ ಎಂದರೆ ಸರಿ. ಏಕೆಂದರೆ ಈ ಕೇಸ್ ನಡೆದಿರುತ್ತದೆ, ಆ ಕಾರಣ ದಾಖಲಾಗಿರುವುದಿಲ್ಲ. ಕೆಳ ನ್ಯಾಯಾಲಯ ಡಿಕ್ರಿ ತಿದ್ದುಪಡೆ ಮಾಡಿದ ನಂತರ ಪುರಸಭೆ ರವರ ಮೇಲೆ ನಿಪಿ-3 ರಂತೆ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿ.

ಸದ್ಯ ಪುರಸಭೆಗಳಲ್ಲಿ ಎಲ್ಲ ದಾಖಲಾತಿಗಳು ಆನ್‌ಲೈನ್ ಆಗಿರುತ್ತವೆ ಎಂದರೆ ಸರಿ, ಈ ಕೇಸಿನದ್ದು ಮಾತ್ರ ಆಗಿಲ್ಲ. ಸದರಿ ಆನ್‌ಲೈನ್ ಮಾಡಬೇಕಾದರೆ ದಾವಾ ಸ್ವತ್ತು ಹೇಗೆ ಬಂದಿರುತ್ತದೆ ಎಂದು ವಿಚಾರಣೆ ಮಾಡುತ್ತಾರೆ ಎಂದರೆ ಸರಿ. ನಮ್ಮ ಹೆಸರಿನಲ್ಲಿ ನಾವು ಹೇಳಿದಂತೆ ವಿಸ್ತೀರ್ಣದ ದಾಖಲೆ ಇರದೇ ಇರುವ ಕಾರಣ ನಮ್ಮ ಹೆಸರು ದಾಖಲಾಗಿಲ್ಲ ಎಂದರೆ ಸರಿಯಲ್ಲ. ಮೇಲ್ಮನವಿ ಸಲ್ಲಿಸಲು ಆಡಳಿತಾತ್ಮಕ ತೊಂದರೆಗಳಿಂದ ಅಪೀಲುದಾರರಿಗೆ ಸ್ವಲ್ಪ ತಡವಾಗಿರುತ್ತದೆ ಎಂದರೆ ಗೊತ್ತಿಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಆಳಂದ.